# ಕಿರುತೆರೆಯಲ್ಲಿ ಆಯುಷ್ಯ ಜಾಸ್ತಿ

ರೇಖಾ ಮೋಹನ್ (ರೇಮೋ)

ಕಲರ್ಸ್ ಕನ್ನಡದ ಮಜಾ ಟಾಕೀಸ್ ಗಾಯಕಿ

★ *ಸಾಂದರ್ಭಿಕ ಗೀತ ರಚನೆ ಗಾಯನ ಹೇಗೆ ಸಾಧ್ಯವಾಗುತ್ತದೆ?*

ಸಂಗೀತ ನನ್ನುಸಿರು. ಅದರ ಪ್ರಭಾವದಿಂದ ಸಾಧ್ಯ ಎಂದುಕೊಂಡಿದ್ದೇನೆ. ನನ್ನ ತಂದೆ ಅಂಜನ್‌ಕುಮಾರ್ ಸಂಗೀತ ಪ್ರೇಮಿ. ನನ್ನ ಅಮ್ಮ ಮಂಗಳ ಅಂಜನ್ ಎರಡು ಸಾವಿರಕ್ಕೂ ಅಧಿಕ ಹಾಡುಗಳನ್ನು ಹಾಡಿದ್ದಾರೆ. ಆದರೂ ಆಕೆ ಎಲೆಮರೆಯ ಕಾಯಿಯಾಗಿಯೇ ಉಳಿದರು. ಹಂಸಲೇಖ ಅವರು ನನ್ನನ್ನು ದೊಡ್ಡ ಮಟ್ಟದಲ್ಲಿ ಪ್ರಭಾವಿಸಿದ್ದಾರೆ. ನಿತ್ಯ ಅವರ 10 ಗೀತೆಗಳನ್ನಾದರೂ ಕೇಳುವ ರೂಢಿ ಈಗಲೂ ಇದೆ. ಅವರ ಪ್ರಭಾವದಿಂದ ನನ್ನ ಕಾಲೇಜು ದಿನಗಳಲ್ಲಿ ಲಿರಿಕ್ಸ್ ಡಬ್ ಮಾಡುತ್ತಿದ್ದೆ. ಪ್ರಾಸಗಳನ್ನು ಜೋಡಿಸಿ ತಮಾಷೆ–ಹರಟೆಗೆ ಬಳಸುತ್ತಿದ್ದೆ. ಅದನ್ನು ಸ್ನೇಹಿತರು ಉತ್ತೇಜಿಸಿದರು, ಉದ್ದೀಪಿಸಿದರು. ಅದೆಲ್ಲದರ ಒಟ್ಟು ಅಂದ ಇದರ ಹಿಂದಿದೆ. ಒಟ್ಟಾರೆ ನಮ್ಮ ಕೌಟುಂಬಿಕ ವಾತಾವರಣವೇ ಅಂತಹದ್ದು. ನಮ್ಮ ಅಜ್ಜಿ ಸಾವಿರಾರು ಹಾಡನ್ನು ರಚಿಸಿದ್ದರು. ನನ್ನ ಪತಿ ಮೋಹನ್ ಕೂಡ ಗಾಯಕರು. ಹನ್ನೊಂದರ ಪ್ರಾಯದ ಮಗಳು ಮೇಧಿನಿನೂ ಹಾಡುತ್ತಾಳೆ.

★ *ಗಾಯನದ ಜೊತೆ ನಟನೆ, ನೃತ್ಯ ಇದೆಲ್ಲಾ ಕಷ್ಟ ಆಗಲ್ವಾ?*

ನಟ ರವಿಚಂದ್ರನ್ ಅವರ ದೊಡ್ಡ ಅಭಿಮಾನಿ ನಾನು. ಮೊದಲು ಹಾಡು ಹೇಳುತ್ತಾ ನೃತ್ಯವನ್ನೂ ಮಾಡುತ್ತಿದ್ದೆ. ಮಿಮಿಕ್ರಿ ಮಾಡುತ್ತಿದ್ದೆ. ಇದು ಸಾರ್ವಜನಿಕ ಕಾರ್ಯಕ್ರಮಗಳನ್ನು ನೀಡುವ ಸಂದರ್ಭದಲ್ಲಿ ಅನುಕೂಲವಾಯಿತು. 'ಪ್ರೀತಿಗಾಗಿ' ಧಾರಾವಾಹಿಗೆ ಮೊದಲು ಬಣ್ಣ ಹಚ್ಚಿದೆ. ಅದೂವರೆಗೆ ನನಗೆ ನಟನೆ ಬರುತ್ತದೆ ಎಂದೇ ಗೊತ್ತಿರಲಿಲ್ಲ. ಮಜಾಟಾಕಿಸ್‌ನಲ್ಲಿ ನಟಿ ಮತ್ತಷ್ಟು ಪಕ್ವಗೊಂಡಿದ್ದಾಳೆ. 'ಮಂಗಳೂರು ಹುಡುಗಿ ಹುಬ್ಬಳ್ಳಿ ಹುಡುಗ'ದಲ್ಲಿ ಕಂಪೆನಿಯ ಯಜಮಾನಿ (ರೇಮೋ) ಪಾತ್ರವನ್ನು ನಿರ್ವಹಿಸುತ್ತಿದ್ದೇನೆ. ಈಗ ಸುಮಾರು ಸಿನಿಮಾಗಳಲ್ಲಿಯೂ ಅವಕಾಶಗಳು ಬಂದಿವೆ. ಯಾವುದೂ ಹೊಂದಾಣಿಕೆಯಾಗಿಲ್ಲ. ನನ್ನ ಪ್ಯಾಶನ್ ಗಾಯನ. ಅದನ್ನೇ ಆಯ್ಕೆ ಮಾಡಿಕೊಂಡೆ. ಲಿರಿಕ್ಸ್ ರೂಪಿಸುವುದು ನನ್ನ ಆಸೆಯಾಗಿತ್ತು. ಆಗಿದ್ದು ಗಾಯಕಿ. ಮುಂದೆ ಅದನ್ನೂ ಮಾಡಬೇಕಿದೆ.

★ *ತೆರೆಯ ಹಿಂದೆ ಮತ್ತು ತೆರೆಯ ಮೇಲಿನ ಕಥೆ ಹೇಳುವುದಾದರೆ...*

ತೆರೆಯ ಹಿಂದಿನ ಕಥೆ ತುಂಬಾನೇ ಕಷ್ಟಕರವಾಗಿರುತ್ತದೆ. ತಾಂತ್ರಿಕ ಕೌಶಲ್ಯದ ಶ್ರಮವೇ ದೊಡ್ಡ ದೊಡ್ಡ ಸ್ಟಾರ್‌ಗಳನ್ನೂ ರೂಪಿಸಲು ಸಹಾಯ ಮಾಡುತ್ತದೆ ಎನ್ನುವುದು ನನ್ನ ವೈಯಕ್ತಿಕ ಅಭಿಪ್ರಾಯ. ಹಾಗೆಂದು ನಟನೆ ಸುಲಭ ಎಂದಲ್ಲ. ನಟನೆಗೆ ಪೂರಕವಾಗಿ ಅಪರಿಮಿತ ಪರಿಶ್ರಮ ತೆರೆಯ ಹಿಂದೆ ವಿನಿಯೋಗ ಆಗಿರುತ್ತದೆ. ಆದರೆ ವೀಕ್ಷಕರ ಎದುರು ಆ ಶ್ರಮ ಕಾಣಿಸುವುದಿಲ್ಲ. ನಾನೇ ಎಷ್ಟೊಂದು ಹಾಡುಗಳನ್ನು ಹೇಳಿದ್ದೇನೆ. ಆಲ್ಬಮ್ ಮಾಡಿದ್ದೇನೆ. ಇಷ್ಟಾದರೂ ನನಗೊಂದು ಐಡೆಂಟಿಟಿ ಬಂದಿದ್ದು 'ಮಜಾ ಟಾಕಿಸ್'ನಿಂದ. ವೃತ್ತಿ ಹೊಟ್ಟೆಕಿಚ್ಚು ಇರುವವರೂ ಕೂಡ ಈಗ ಅಭಿನಂದಿಸುತ್ತಾರೆ – ಬೆನ್ನುತಟ್ಟುತ್ತಿದ್ದಾರೆ ಅಂದರೆ ಅದಕ್ಕೆ ಸಾರ್ವಜನಿಕ ಮನ್ನಣೆ ಬೇಕು. ಅದು ತೆರೆಯ ಮೇಲೆ ಸಿಗುತ್ತದೆ ಎನ್ನುವುದು ನನ್ನ ಭಾವನೆ.

★ *ಕಿರುತೆರೆ, ಹಿರಿತೆರೆ, ಸಾರ್ವಜನಿಕ ವೇದಿಕೆ ಒಮ್ಮೆ ಹೋಲಿಸಿಕೊಂಡರೆ...*

ಹಿರಿತೆರೆ ಹಿಟ್ ಆದರೆ ಮಾತ್ರ ಗಮನಕ್ಕೆ ಬರುತ್ತದೆ. ಅದು ಕ್ಷಣಿಕ. ಕಿರುತೆರೆಗೆ ಹೆಚ್ಚಿನ ಭವಿಷ್ಯವೂ ದೀರ್ಘಕಾಲದ ಬಾಳಿಕೆಯೂ ಇರುತ್ತದೆ. ಸಾರ್ವಜನಿಕ ವೇದಿಕೆ ಅತ್ಯಂತ ಸವಾಲಿನ ಕೆಲಸ. ಮೂರು ಗಂಟೆಯಾಗಲಿ ಆರು ಗಂಟೆಯಾಗಲಿ ಪ್ರೇಕ್ಷಕರನ್ನು ಹಿಡಿದಿಡಬೇಕು. ಅವರನ್ನು ಸಂತೋಷ ಪಡಿಸಬೇಕು. ಅದಕ್ಕೆ ಬೇಕಾಗುವ ಎಲ್ಲಾ ಕಸರತ್ತು ಮಾಡಬೇಕಾಗುತ್ತದೆ.

★ *ಮಜಾಟಾಕೀಸ್‌ನಲ್ಲಿ ಹಾಸ್ಯ ಅಪಹಾಸ್ಯವಾಗಿ ನೋವಾಗುವುದಿಲ್ಲವೇ?*

ಹೌದು. ಹಾಡುವುದಕ್ಕೆ ಸೀಮಿತವಾದವಳು ಹರಟೆಯಲ್ಲಿ ತೊಡಗಿದೆ. ಆಮೇಲೆ ನಾನೂ ಪ್ರತಿ ಟಾಂಟ್ ಕೊಡತೊಡಗಿದೆ. ಒಮ್ಮೆ ಹೀಗೆ ನೋವಾಗಿ ಅತ್ತಿದ್ದೆ. ಆಗ ಸೃಜನ್ ನನಗೆ ಸಾಂತ್ವನ ಹೇಳುವ ಜೊತೆಗೆ 'ಒಂದು ಪಾತ್ರ ಎಂದು ಗುರುತಿಸಿಕೋ ಖುಷಿಪಡು. ಮಂಡ್ಯರಮೇಶ್ ಅವರಂತಹ ದೊಡ್ಡ ನಟ ಎಷ್ಟು ಎಂಜಾಯ್ ಮಾಡುತ್ತಾರೆ ನೋಡು' ಎಂದು ತಿಳಿವಳಿಕೆ ಮೂಡಿಸಿದರು. ನಟಿ ಅಪರ್ಣಾ ಕೂಡ 'ಕಲಾವಿದಳಾಗಿ ನೋಡು' ಎಂದರು. ಅದು ನನಗೂ ಸರಿ ಅನ್ನಿಸಿತು. ಹಾಗಾಗಿ ವೈಯಕ್ತಿಕ ನಿಂದನೆ ಅಂತ ಈಗ ಅನ್ನಿಸಲ್ಲ. ಮಜಾಟಾಕೀಸ್ ತಂಡದಲ್ಲಿ ಸಿಕ್ಕಾಪಟ್ಟೆ ಸ್ವಾತಂತ್ರ್ಯವಿದೆ. ಗೌರವವೂ ಇದೆ.

■ ರಾಗು

